1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 15252-2022

ಸಿಡಬ್ಲ್ಯೂ -1 ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಜಯಲಕ್ಷ್ಮೀ ಜಿ. ಹೆಚ್ |
| ತಂದೆಯ ಹೆಸರು | : | ಹನುಮಯ್ಯ |
| ವಯಸ್ಸು | : | 45 ವರ್ಷ |
| ಕೆಲಸ | : | ವಿಶ್ರಾಂತ ಜೀವನ |
| ವಾಸ | : | ಅಶ್ವತನಗರ, ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 08-09-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ಆರೋಪಿಗಳು ಗೊತ್ತು. ಚಾಸಾ 2 ಮತ್ತು 3 ರವರು ಗೊತ್ತು. ಸಾಕ್ಷಿಯು ದೂರು ಮತ್ತು ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.1ಎ ಮತ್ತು 2ಎ ಎಂದು ಗುರುತಿಸಲಾಯಿತು.

ಆರೋಪಿಗಳು ನನಗೆ ಸುಮಾರು 20 ವರ್ಷಗಳಿಂದ ಪರಿಚಯ. ಆರೋಪಿಗಳು ಮತ್ತು ನನ್ನ ನಡುವೆ ಹಣಕಾಸಿನ ವ್ಯವಹಾರ ಇತ್ತು. ನಾನು ದಿ. 30-12-2021 ರಂದು ಆರೋಪಿಗಳು ಮೇಖ್ರಿ ಸರ್ಕಲ್ ಬಳಿ ಸಂಜೆ 04-4.40 ಗಂಟೆಯ ಸಮಯದಲ್ಲಿ ಆರೋಪಿಗಳು ನನ್ನನ್ನು ಕರೆದಿದ್ದು ಅಲ್ಲಿಗೆ ಆರೋಪಿಗಳುವ ಮತ್ತು ಕೆಲವು ಅಪರಿಚಿತ ವ್ಯಕಿಗಳು ಸಹ ಬಂದಿದ್ದರು, ನಾನು ಆರೋಪಿಗಳ ವಿರುದ್ಧ ದಾಖಲಾಸಿದ ಚೆಕ್ ಬೌನ್ಸ ಪ್ರಕರಣವನ್ನು ವಾಪಸ್ಸು ಪಡೆಯಬೇಕು ಎಂದು ನಿನ್ನ ಅಮ್ಮನ್ನ ಎಂದು ಬೈದಿರುತ್ತಾರೆ, ಕೊಲೆ ಮಾಡಿ, ಜೈಲಿಗೆ ಹೋಗುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನಾನು ಆರೋಪಿಗಳ ವಿರುದ್ದ ಹಾಕಿದ್ದ ಚೆಕ ಬೌನ್ಸ ಕೇಸನಲ್ಲಿ ಶಿಕ್ಷೆಯಾಗಿರುತ್ತದೆ. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ನಂತರ ಪೋಲೀಸರು ಸ್ಥಳಕ್ಕೆ ಬಂದು ಮಹಜರ್ ನ್ನು ಮಾಡಿರುತ್ತಾರೆ. ಸ್ಥಳದಲ್ಲಿ ನಾನು ಮತ್ತು ಪೋಲೀಸರು ಹಾಜರಿದ್ದೇವು.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ಮಹಜರ್ ನ ಸಮಯದಲ್ಲಿ ಚಾಸಾ 2 ಮತ್ತು 3 ರವರು ಸಹ ಹಾಜರಿದ್ದು ಮಹಜರ್ ಗೆ ಸಹಿ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ಮರೆತು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಆರೋಪಿಗಳು ನನಗೆ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಕೇವಲ ಚೆಕ ಬೌನ್ಸ ಪ್ರಕರಣದ ದ್ವೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ